ವಿಷಯ :- ಬೆಂಗಳೂರು ನಗರದಲ್ಲಿ ದಾಖಲಾಗಿರುವ ವರದಕ್ಷಿಣೆ ಸಾವುಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 242 (1234)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ) :- ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ 1994 ಜನವರಿಯಿಂದ 1996 ಮಾರ್ಚ್‌ರವರೆಗೆ ದಾಖಲಾಗಿರುವ ವರದಕ್ಷಿಣೆ ಸಾವುಗಳ ಸಂಖ್ಯೆ ಎಷ್ಟು ;

ಆ) ಇವುಗಳ ಪೈಕಿ ಎಷ್ಟು ಪ್ರಕರಣಗಳಲ್ಲಿ ಶಿಕ್ಷೆಯಾಗಿವೆ.

ಇ) ವರದಕ್ಷಿಣೆ ಸಾವುಗಳನ್ನು ಹಾಗೂ ಕಿರುಕುಳವನ್ನು ತಪ್ಪಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :-

ಅ) 136
(ದಿನಾಂಕ : 30-3-1996 ರ ವರೆಗೆ)

ಆ) ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದೆ.

ಇ) ಮಹಿಳೆಯರ ಸಮಸ್ಯೆಗಳನ್ನು ವಿಶೇಷವಾಗಿ ಅಧ್ಯತೆ ಮೇರೆಗೆ ಗಮನಿಸಿ, ಸೂಕ್ತ ಕ್ರಮ ಕೈಗೊಳ್ಳಲು ಈಗಾಗಲೇ ಸರ್ಕಾರವು 5 ಸರ್ವ ಮಹಿಳಾ ಪೋಲೀಸ್ ಠಾಣೆಗಳನ್ನು ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಧಾರವಾಡ, ಮಂಗಳೂರು ಮತ್ತು ಗುಲ್ಬರ್ಗಾಗಳಲ್ಲಿ ಸ್ಥಾಪಿಸಿದ್ದು, ಈ ಠಾಣೆಗಳಲ್ಲಿ ವರದಕ್ಷಿಣೆ ಕಿರುಕುಳದ ಹಿನ್ನೆಲೆಯಲ್ಲಿ ಉದ್ಭವಿಸುತ್ತಿರುವ ಕೌಟುಂಬಿಕ ಸಮಸ್ಯೆಗಳನ್ನು ಪರಿಹರಿಸುವ ತೀವ್ರ ಕ್ರಮ ಹಮ್ಮಿಕೊಳ್ಳಲಾಗಿದೆ.

ಇ) ಬೆಂಗಳೂರು ನಗರ ಪೋಲೀಸ್ ಕಮೀಷನರ್‌ರವರ ಕಛೇರಿಯಲ್ಲಿ ಮಹಿಳೆಯರ ಸಲುವಾಗಿ ಕಾನ್‌ಸೆಲಿಂಗ್ ಸೆಂಟರ್ ಎಂಬುದನ್ನು ಪ್ರಾರಂಭಿಸಿದ್ದು, ಸಮಾಜ ಕಲ್ಯಾಣ ಇಲಾಖೆಯಿಂದ ನೇಮಕವಾದ 7 ಜನ ಮಹಿಳಾ ಕಾನ್‌ಸೆಲಿಂಗ್‌ಗಳು ಪ್ರತಿದಿನ ಈ ಕೇಂದ್ರಕ್ಕೆ ಭೇಟಿ ಕೊಟ್ಟು ವರದಕ್ಷಿಣೆ ಇತ್ಯಾದಿ ಕೌಟುಂಬಿಕ ಸಮಸ್ಯೆಗಳಿಂದ ಬಳಲುತ್ತಿರುವ ಸಾರ್ವಜನಿಕ ಮಹಿಳೆಯರಿಗೆ ಸೂಕ್ತ ಪರಿಹಾರ ಕೊಡಲು ಪ್ರಯತ್ನಿಸುತ್ತಿದ್ದಾರೆ.

ಶ್ರೀ ರಾಮಲಿಂಗಾರೆಡ್ಡಿ :- ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿ 1994 ನೇ ಜನವರಿಯಿಂದ 1996 ರ ಮಾರ್ಚ್ ತಿಂಗಳವರೆಗೆ ದಾಖಲಾಗಿರುವ ವರದಕ್ಷಿಣೆ ಸಾವುಗಳ ಸಂಖ್ಯೆ ಎಷ್ಟು ಎಂದು ಪ್ರಶ್ನೆ ಕೇಳಿರುವುದಕ್ಕೆ ಉತ್ತರವಾಗಿ

136 ಪ್ರಕರಣಗಳೆಂದು ತಿಳಿಸಿದ್ದಾರೆ. ವರದಕ್ಷಿಣೆ ಹಿಂಸೆಯಿಂದ ಸಾವುಗಳು ಸಂಭವಿಸಿ ದೂರುಗಳನ್ನು ಕೊಟ್ಟ ಪ್ರಕರಣಗಳು ಇಷ್ಟು ಸಂಖ್ಯೆಯಲ್ಲಿದ್ದರೆ ದೂರು ಕೊಡದಿರುವ ಪ್ರಕರಣಗಳೇ ಬೇಕಾದಷ್ಟಿವೆ. ಎರಡನೆಯ ಪ್ರಶ್ನೆಯಲ್ಲಿ ಇವುಗಳ ಪೈಕಿ ಎಷ್ಟು ಪ್ರಕರಣ ಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗಿದೆಯೆಂದು ಕೇಳಿರುವುದಕ್ಕೆ ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದೆಯೆಂದು ತಿಳಿಸಿದ್ದಾರೆ. ಅಂದರೆ, ಯಾರಿಗೂ ಶಿಕ್ಷೆಯಾಗಿರುವುದಿಲ್ಲ. ಸರ್ಕಾರ ಈ ಒಂದು ಮಾಮೂಲಿ ಧಾಟಿಯಲ್ಲೇ ಹೋದರೆ ಯಾರು ತಪ್ಪಿತಸ್ಥರಿದ್ದಾರೋ ಅವರಿಗೆ ಶಿಕ್ಷೆಯಾಗುವುದಿಲ್ಲ, ಅಲ್ಲದೇ, ದಿನಗಳೆದಂತೆ ಕೊಟ್ಟ ದೂರುಗಳು ದುರ್ಬಲ ಗೊಳ್ಳುತ್ತದಾದ್ದರಿಂದ, ಈ ಕುರಿತು ನನ್ನ ಒಂದು ಸಲಹೆಯೇನೆಂದರೆ, ವರದಕ್ಷಿಣೆ ಸಾವುಗಳಿಗೆ ಸಂಬಂಧಿಸಿದಂತೆ ತಾವು ಒಂದು ವಿಶೇಷನ್ಯಾಯಾಲಯ ಸ್ಥಾಪಿಸಬೇಕೆಂದು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ರೋಷನ್ ಬೇಗ್ :– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ರಾಮಲಿಂಗಾರೆಡ್ಡಿಯವರು ಮಾತನಾಡುತ್ತಾ ವರದಕ್ಷಿಣೆ ಪ್ರಕರಣಗಳಲ್ಲಿ ಇದುವರೆವಿಗೂ ಯಾರಿಗೂ ಶಿಕ್ಷೆ ಆಗಿಲ್ಲವೆಂದು ಏನು ಹೇಳುತ್ತಿದ್ದಾರೆ; ಶಿಕ್ಷೆ ಆಗಿರುತ್ತದೆ. ಆದರೆ, ಅಮು 1994 ನೇ ಇಸವಿಯಿಂದ ಮಾಹಿತಿ ಕೇಳಿರುವುದರಿಂದ ಅಲ್ಲಿಂದ ವರದಕ್ಷಿಣೆ ಸಾವು ಕುರಿತ ಪ್ರಕರಣಗಳು ದಾಖಲಾಗಿದ್ದು ನ್ಯಾಯಾಲಯದಲ್ಲಿ ವಿಚಾರಣೆ ನಡೆಯು ತ್ತಿರುತ್ತವೆ. 1994 ಕ್ಕೂ ಮುಂಚಿತವಾಗಿ ದಾಖಲಾಗಿರುವ ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗಿರುತ್ತದೆಂದು ತಿಳಿಯಬಯಸುತ್ತೇನೆ.

ಅಧ್ಯಕ್ಷರು :– ಶಿಕ್ಷೆಗೊಳಗಾದವರ ಪೈಕಿ ಯಾರಾದರೂ ಮಂತ್ರಿಗಳು, ಎಂ.ಎಲ್.ಎ. ಗಳಿದ್ದಾರೆಯೇ?

ಶ್ರೀ ಆರ್. ರೋಷನ್ ಬೇಗ್ :– ಆ ಕುರಿತು ಪ್ರತ್ಯೇಕ ಪ್ರಶ್ನೆ ಕೇಳಿದರೆ ಮಾಹಿತಿ ಒದಗಿಸಿಕೊಡುತ್ತೇನೆ. ಆದರೆ, ಒಂದು ಮಾತನ್ನು ಹೇಳಬಯಸುವುದೇನೆಂದರೆ, ನಾವು ಸರ್ಕಾರದ ವತಿಯಿಂದ ಇನ್ನೊಂದು ಏನು ಕ್ರಮ ತೆಗೆದುಕೊಂಡಿದ್ದೇವೆಂದರೆ, ವರದಕ್ಷಿಣೆ ರೂಪವಾಗಿ ಆಭರಣ, ಹಣ, ಆಸ್ತಿಯನ್ನು ಕೊಟ್ಟಿದ್ದು, ಒಂದು ವೇಳೆ ಇವುಗಳನ್ನು ಕೊಟ್ಟಿರುವವರ ಸಾವು ಸಂಭವಿಸಿದಲ್ಲಿ ಇವೆಲ್ಲವನ್ನೂ ಸರ್ಕಾರ ಸೀಜ್‌ಮಾಡಿ ಕಾನೂನಿನ ಪ್ರಕಾರ ನ್ಯಾಯಾಲಯದ ಮೂಲಕ ಆದರ ವಾರಸುದಾರರಿಗೆ ಹಿಂತಿರುಗಿ ಕೊಡಲಾಗತ್ತದೆ. ಇನ್ನು ವರದಕ್ಷಿಣೆ ಸಾವುಗಳಿಗೆ ಸಂಬಂಧಿಸಿದಂತೆ ವಿಶೇಷ ನ್ಯಾಯಾ ಲಯವನ್ನು ಸ್ಥಾಪಿಸಬೇಕೆಂದು ಕೇಳಿರುವುದಕ್ಕೆ ಈ ಕುರಿತು ತೀವ್ರವಾಗಿ ಪ್ರಯತ್ನಿಸ ಲಾಗುತ್ತಿದೆಯೆಂದು ಹೇಳಬಯಸುತ್ತೇನೆ.

ಶ್ರೀ ವೈ. ರಾಮಕೃಷ್ಣ :– ತಾವು ದಿನಾಂಕ 30-3-1996 ರವರೆಗೆ ಒಟ್ಟು 136 ವರದಕ್ಷಿಣೆ ಸಾವುಗಳು ಉಂಟಾಗಿವೆಯೆಂದು ಉತ್ತರದಲ್ಲಿ ತಿಳಿಸಿದ್ದೀರಿ. ಈ ಪೈಕಿ ಸಾಯುವುದಕ್ಕೂ ಮೊದಲೇ ದೂರು ಕೊಟ್ಟ ಪ್ರಕರಣಗಳು ಎಷ್ಟಿವೆ ಎಂಬುದನ್ನು ತಿಳಿಸುವಿರಾ?

ಶ್ರೀ ಆರ್. ರೋಷನ್ ಬೇಗ್ :- ತಾವು ಆ ಬಗ್ಗೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಒದಗಿಸಿಕೊಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ :- ಮಾನ್ಯ ಅಧ್ಯಕ್ಷರೆ, ವರದಕ್ಷಿಣೆ ಎನ್ನುವುದು ಈ ನಾಗರಿಕತೆಯಲ್ಲಿ ಕಂಡುಬರುವ ಒಂದು ಕುಷ್ಟರೋಗ. ಏನಿದೆ, ಅದು ಆಷ್ಟೊಂದು ಬಿಗಿಯಾಗಿಲ್ಲವಾದ್ದರಿಂದ, ಕಾನೂನನ್ನು ಇನ್ನಷ್ಟು ಸದೃಢಗೊಳಿಸಿ ನಿಜವಾದ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವುದಕ್ಕೆ ಕ್ರಮ ಕೈಗೊಳ್ಳುವ ಬಗ್ಗೆ ಯೋಚಿಸುತ್ತಿರೋ?

ಶ್ರೀ ಆರ್. ರೋಷನ್ ಬೇಗ್ :- ಇದು ಉತ್ತಮ ಸಲಹೆಯಾಗಿರುವುದರಿಂದ, ಪರಿಶೀಲಿಸುತ್ತೇನೆ.

ಶ್ರೀ ಲೀಲಾದೇವಿ. ಆರ್. ಪ್ರಸಾದ್ :- ವರದಕ್ಷಿಣೆ ಸಾವು ಪ್ರಕರಣ ಬಗ್ಗೆ ಮಾನ್ಯ ಮಂತ್ರಿಗಳು ಬಹಳ ಗಂಭೀರವಾಗಿ ಯೋಚಿಸಬೇಕು. ಸಾವು ಸಂಭವಿಸಿದಾಗ ಅವರು ವರದಕ್ಷಿಣೆ ರೂಪದಲ್ಲಿ ಹಿಂದೆ ಕೊಟ್ಟಿದ್ದ ಒಡವೆಗಳನ್ನಾಗಲಿ, ಹಣವನ್ನಾಗಲೀ ಇಲ್ಲವೇ, ಆಸ್ತಿಯನ್ನಾಗಲಿ ಅವರ ವಾರಸುದಾರರಿಗೆ ಕೊಡಲಾಗುವುದೆಂದು ಸಚಿವರು ಹೇಳಿದರು. ಆದರೆ, ಪರಿಸ್ಥಿತಿ ಹಾಗಿಲ್ಲ. ಸಾಯಿಸುವಾಗ ಅವೆಲ್ಲವನ್ನೂ ಕಸಿದುಕೊಂಡೇ ಸಾಯಿಸಿರುತ್ತಾರೆ. ಈಗಿರುವ ಕಾನೂನಿಗೆ ಏನೇನೂ ಬೆಲೆಯಿಲ್ಲದಂತಾಗಿದೆ. ಯಾರು ತಪ್ಪಿತಸ್ಥರಿದ್ದಾರೋ ಅವರನ್ನು ಕೂಡಲೇ ಬಂಧಿಸಿ ಮೂರು ತಿಂಗಳೊಳಗೆ ಶಿಕ್ಷೆ ವಿಧಿಸುವಂಥ ಕಾನೂನು ತರಬೇಕು. ಆದು ಬಿಟ್ಟು ಪ್ರಕರಣವನ್ನು ಸಿ.ಓ.ಡಿ.ಗೆ, ಪೊಲೀಸಿನವರಿಗೆ ವಹಿಸಿದ್ದೇವೆಯೆಂದರೆ ಏನೂ ಪ್ರಯೋಜನವಿಲ್ಲ.

ಅಧ್ಯಕ್ಷರು :- ಈ ಕುರಿತು ತಾವು ಸಚಿವ ಸಂಪುಟದಲ್ಲಿ ಪ್ರಸ್ತಾಪಿಸಿ, ಅವರು ಹಾಗೊಂದು ವೇಳೆ ಒಪ್ಪದಿದ್ದರೆ ರಾಜೀನಾಮೆ ಕೊಡುತ್ತೇವೆಂದು ಬೆದರಿಕೆ ಹಾಕಿ.

ಶ್ರೀ ವಾಟಾಳ್ ನಾಗರಾಜ್ :- ಅವರು ಆಕಸ್ಮಾತ್ ರಾಜೀನಾಮೆ ಕೊಟ್ಟರೂ ಏನೂ ಪ್ರಯೋಜನವಾಗಲಿಲ್ಲವೆಂದರೆ? ಈಗಾಗಲೇ ಹಿಂದೆ ಅವರು ರಾಜ್ಯಸಭೆಗೆ ಸದಸ್ಯರಾಗಿ ಹೋಗುವುದನ್ನು ತಪ್ಪಿಸಿರುವುದರಿಂದ ಇಲ್ಲಿಯೇ ಉಳಿದುಕೊಂಡಿದ್ದಾರೆ.

ಶ್ರೀ ಹೆಚ್. ಎನ್. ನಂಜೇಗೌಡ :- ಮಂತ್ರಿಗಳೇ ಮಂತ್ರಿಗಳಿಗೆ ಪ್ರಶ್ನೆ ಕೇಳುವುದು ಸತ್ಸಂಪ್ರದಾಯವಾಗುವುದಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ :- ಮನೆಯಲ್ಲಿ ಅಡುಗೆ ಮಾಡುವುದಕ್ಕೆ ಸೀಮೆಎಣ್ಣೆ ಇರುವುದಿಲ್ಲ, ಆದರೆ, ಸೊಸೆಯನ್ನು ಸುಡುವುದಕ್ಕೆ ಮಾತ್ರ ಸೀಮೆಎಣ್ಣೆ ಇರುತ್ತದೆ!

ಅಧ್ಯಕ್ಷರು :- ಎಲ್ಲಿಯವರೆಗೆ ಅತ್ತೆಯಾದವರಿಗೆ ತಾನೂ ಸಹ ತಾಯಿ ಎಂದು ನೆನಪಾಗುವುದಿಲ್ಲವೋ ಅಲ್ಲಿಯವರೆವಿಗೂ ಇದು ಹೀಗೆ ಮುಂದುವರೆಯುತ್ತದೆ.

ಶ್ರೀ ವಾಟಾಳ್ ನಾಗರಾಜ್ :- ಅತ್ತಿಗೊಂದು ಕಾಲ, ಸೊಸೆಗೊಂದು ಕಾಲ ಬರುತ್ತದೆ.

ಶ್ರೀ ಬಿ. ಮುನಿಯಪ್ಪ :- ನಾವು ವರದಕ್ಷಿಣೆ ಪ್ರಕರಣದ ಸಾವಿನ ವಿಚಾರದಲ್ಲಿ ಕೇಳಿರುವಂತೆ ಸ್ಟೌವ್ ಸೊಸೆ ಮೇಲೆಯೇ ಮಾತ್ರ ಸಿಡಿದು ಆಕೆ ಸಾವಿಗೀಡಾಗುತ್ತಾಳೆ. ಅತ್ತೆಯ ಮೇಲೆ ಸ್ಟೌವ್ ಸಿಡಿಯುವುದಿಲ್ಲ! ಇದರ ಬಗ್ಗೆ ಸರ್ಕಾರದಲ್ಲಿ ಮಾಹಿತಿ ಇದೆಯೇ?

ಶ್ರೀ ಆರ್. ರೋಷನ್ ಬೇಗ್ :- ವರದಕ್ಷಿಣೆ ಎನ್ನುವುದು ಹಳೆಯ ಕಾಲದ ಒಂದು ಪದ್ಧತಿಯಾಗಿದೆ. ಇದೊಂದು ಸಾಮಾಜಿಕ ಪಿಡುಗಾಗಿರುವುದರಿಂದ ಮಹಿಳೆಯರ ಸಮಸ್ಯೆಗಳನ್ನು ವಿಶೇಷವಾಗಿ ಆದ್ಯತೆ ಮೇರೆಗೆ ಗಮನಿಸಿ ಸೂಕ್ತ ಕ್ರಮ ಕೈಗೊಳ್ಳಲು ಈಗಾಗಲೇ ನಮ್ಮ ಸರ್ಕಾರವು 5 ಸರ್ವ ಮಹಿಳಾ ಪೋಲೀಸ್ ಠಾಣೆಗಳನ್ನು ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಧಾರವಾಡ, ಮಂಗಳೂರು ಮತ್ತು ಗುಲ್ಬರ್ಗಾ ಗಳಲ್ಲಿ ಸ್ಥಾಪಿಸಿದ್ದು, ಇನ್ನೂ ಹದಿನೇಳು ಸರ್ವ ಮಹಿಳಾ ಪೋಲೀಸ್ ಠಾಣೆಗಳನ್ನು ರಾಜ್ಯಾದ್ಯಂತ ಪ್ರಾರಂಭಿಸುತ್ತಿದ್ದೇವೆ. ಇದಲ್ಲದೆ ಬೆಂಗಳೂರು ನಗರ ಪೋಲೀಸ್ ಕಮಿಷನರ್‌ರವರ ಕಛೇರಿಯಲ್ಲಿ ಮಹಿಳೆಯರ ಸಲುವಾಗಿ ಕೌನ್ಸಲಿಂಗ್ ಸೆಂಟರ್ ಪ್ರಾರಂಭಿಸಿದ್ದು, ಸಮಾಜ ಕಲ್ಯಾಣ ಇಲಾಖೆಯಿಂದ ನೇಮಕವಾಗಿರುವ ಸರ್ಕಾರೇತರ ಸಂಸ್ಥೆಯ ಏಳು ಜನ ಮಹಿಳಾ ಕೌನ್ಸಲಿಂಗ್‌ಗಳು ಪ್ರತಿ ದಿವಸ ಸದರಿ ಕೇಂದ್ರಕ್ಕೆ ಭೇಟಿ ಕೊಟ್ಟು ವರದಕ್ಷಿಣೆ ಇತ್ಯಾದಿ ಕೌಟುಂಬಿಕ ಸಮಸ್ಯೆಗಳಿಂದ ಬಳಲುತ್ತಿರುವ ಮಹಿಳೆಯರಿಗೆ ಸೂಕ್ತ ಪರಿಹಾರ ಕೊಡಲು ಪ್ರಯತ್ನಿಸಲಾಗುತ್ತಿದೆ. ಇದೇ ರೀತಿಯ ಕೇಂದ್ರಗಳನ್ನು ಇನ್ನಿತರ ಕೆಲವು ಜಿಲ್ಲೆಗಳಲ್ಲಿ ಪ್ರಾರಂಭಿಸಿದ್ದೇವೆ. ಹಂತ ಹಂತವಾಗಿ ಎಲ್ಲಾ ಜಿಲ್ಲೆಗಳಲ್ಲೂ ಒಂದೊಂದು ಕೌನ್ಸಲಿಂಗ್ ಸೆಂಟರ್‌ಅನ್ನು ತೆರೆಯುವ ಉದ್ದೇಶವಿದೆ.

ವಿಷಯ :- ಬೆಂಗಳೂರಿನ ಕೆಂಪಾಂಬುದಿ ಕೆರೆ ಅಭಿವೃದ್ಧಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 245 (781)

ಶ್ರೀ ಹೆಚ್. ಎನ್. ನಂಜೇಗೌಡ (ಬಸವನಗುಡಿ) ಮಾನ್ಯ ಬೆಂಗಳೂರು ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆಯು ಕೆಂಪೇಗೌಡ ನಗರ, ಬಸವನಗುಡಿ ಕ್ಷೇತ್ರದಲ್ಲಿನ ಕೆಂಪಾಂಬುದಿ ಕೆರೆ ಅಭಿವೃದ್ಧಿಗೊಳಿಸಲು ಏನಾದರೂ ಕ್ರಮ ಕೈಗೊಂಡಿದೆಯೇ?

ಆ) ಹಾಗಿದ್ದಲ್ಲಿ ಯಾವ ವರ್ಷದಲ್ಲಿ ಅಂದಾಜು ವೆಚ್ಚ ತಯಾರಿಸಲಾಗಿತ್ತು ಮತ್ತು? ಅಂದಾಜು ವೆಚ್ಚ, ಮಂಜೂರಾಗಿದ್ದಲ್ಲಿ ವಿವರ?

ಇ) ಅಭಿವೃದ್ಧಿ ಕಾಮಗಾರಿ ಯಾವುದಾದರು ಪ್ರಗತಿಯಲ್ಲಿದೆಯೇ? ಹಾಗಿದ್ದಲ್ಲಿ ಯಾವ ವರ್ಷದಿಂದ?